*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 04-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಹೆಚ್ ವೈ ವಕೀಲರಿಂದಃ ಆರೋಪಿ ಪರವಾಗಿಃ

35. ನಾನು ವಿಧ್ಯಾಭ್ಯಾಸ ಮಾಡಿಲ್ಲ. ನನ್ನ ತಂದೆ ತಾಯಿಗೆ ನಾವು ಒಟ್ಟು 6 ಜನ ಹೆಣ್ಣು ಮಕ್ಕಳು ಮತ್ತು ಒಬ್ಬನೇ ಮಗ ಅಂದರೆ ಆರೋಪಿ. ನಿಮಗೆ ಗಂಡನ್ನು ಹುಡುಕಿ ಮದುವೆ ಮಾಡಿದವನು ಆರೋಪಿ ಎಂದರೆ ಸರಿ. ಆರೋಪಿ ಎಂದಿಗೂ ನಿಮ್ಮ ಬಳಿ ಕೆಟ್ಟದಾಗಿ ನಡೆದುಕೊಂಡಿಲ್ಲ ಪ್ರೀತಿ ವಿಶ್ವಾಸದಿಂದ ಇದ್ದನು ಎಂದರೆ ಸಾಕ್ಷಿ ಇದ್ದನು ಆದರೆ ಕುಡಿದಾಗ ಮಾತ್ರ ಅಕ್ಕ ತಂಗಿ ಯಾರು ಆತನಿಗೆ ನೆನಪಿರುವುದಿಲ್ಲ ಎನ್ನುತ್ತಾರೆ. ಆರೋಪಿ ಮತ್ತು ನಿಮ್ಮ ಗಂಡ ವಿಶ್ವಾಸದಿಂದ ಇದ್ದರು ಎಂದರೆ ಸಾಕ್ಷಿ ನನ್ನ ಗಂಡ ಮೃತಪಡುವ ಹಿಂದಿನ ದಿನ ರಾತ್ರಿ ಅವರಿಬ್ಬರು ಗಲಾಟೆ ಮಾಡಿಕೊಂಡಿದ್ದರು, ಮಾರನೇ ದಿನ ಅವರಿಬ್ಬರು ಚೆನ್ನಾಗಿ ಇದ್ದರು, ಮಾರನೇ ದಿನ ನಾನು ಕೆಲಸ ಮುಗಿಸಿ ಬಂದಾಗ ಆರೋಪಿ ಮತ್ತು ನನ್ನ ಗಂಡ ಪುನಃ ಗಲಾಟೆ ಪ್ರಾರಂಭಿಸಿದರು ಎನ್ನುತ್ತಾರೆ. ಘಟನೆಯ ಒಂದು ವಾರದ ಹಿಂದಿನಿಂದ ಆರೋಪಿ ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದನು, ನನ್ನ ಗಂಡನಿಗೆ ಆರೋಗ್ಯ ಸರಿ ಇಲ್ಲದ

ಕಾರಣ ನಾನು ಒಬ್ಬಳೇ ದುಡಿಯುತ್ತಿದ್ದೆನು ಆದ್ದರಿಂದ ನನ್ನ ಗಂಡ ಆಕೆ ಒಬ್ಬಳೇ ದುಡಿಯುತ್ತಾಳೆ ನೀನು ಮನೆ ಬಿಟ್ಟು ಹೋಗು ಎಂದು ಹೇಳಿದ್ದರಿಂದ ಅವರ ನಡುವೆ ಗಲಾಟೆ ನಡೆಯಿತು ಎನ್ನುತ್ತಾರೆ. ಆರೋಪಿ ನನ್ನ ಗಂಡನ ಮೇಲೆ ಹಲ್ಲೆ ಮಾಡಿದ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಮಾತ್ರ ಮನೆಯಲ್ಲಿ ಇದ್ದೆವು. ಆ ದಿನ ನಾನು ಹೇರೂರಿಗೆ ಕೂಲಿ ಕೆಲಸಕ್ಕೆ ಹೋಗಿದ್ದೆನು, ಮಧ್ಯಾಹ್ನ 4.00 ಗಂಟೆಗೆ ಮನೆಗೆ ವಾಪಾಸ್ಸು ಬಂದೆನು. ನಾನು ಮನೆಗೆ ಬಂದಾಗ ನನ್ನ ಗಂಡ ಮನೆಯ ಒಳಗೆ ಇದ್ದರು ಮತ್ತು ಆರೋಪಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಇರುವ ಅಂಗಡಿಯ ಬಳಿ ಇದ್ದರು. ನಾನು ಮನೆಯ ಒಳಗೆ ಇದ್ದಾಗ ಆಚೆ ಬೊಬ್ಬೆ ಹಿಡುವ ಶಬ್ದ ಕೇಳಿಸಿತು, ಆಚೆ ಬಂದು ನೋಡಿದಾಗ ಆರೋಪಿ ನನ್ನ ಗಂಡನ ಮೇಲೆ ಹಲ್ಲೆ ಮಾಡಿದನು.

36. ನಿಮ್ಮ ಮನೆಯಿಂದ ಆರೋಪಿ ನಿಮ್ಮ ಗಂಡನ ಮೇಲೆ ಹಲ್ಲೆ ಮಾಡಿದ ಸ್ಥಳಕ್ಕೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿ ಸುಮಾರು 3 ಮೀಟರ್ ದೂರವಾಗುತ್ತದೆ ಎನ್ನುತ್ತಾರೆ. ನಿಮ್ಮ ಮನೆಯಿಂದ ನಿಂತು ನೋಡಿದರೆ ಘಟನಾ ಸ್ಥಳ ಕಾಣಿಸುವುದಿಲ್ಲ ಎಂದರೆ ಸಾಕ್ಷಿ ಮನೆಯಿಂದ ಕಾಣಿಸುವುದಿಲ್ಲ ಆದರೆ ಸ್ವಲ್ಪ ಮೇಲೆ ಹೋದರೆ ಕಾಣಿಸುತ್ತದೆ ಎನ್ನುತ್ತಾರೆ. ನಾನು ಅಲ್ಲಿಗೆ ಹೋದಾಗ ನನ್ನ ಗಂಡ ಕೆಳಗೆ ಬಿದ್ದಿದ್ದರು, ಆರೋಪಿ ಅವರ ಪಕ್ಕದಲ್ಲಿ ನಿಂತಿದ್ದನು. ಆಗ ಸಮಯ ಸಂಜೆ 4.15 ಗಂಟೆಯಾಗಿತ್ತು. ಸದರಿ ಸ್ಥಳದ ಚೆಕ್ಕುಬಂದಿಯನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಕೃತ್ಯ ನಡೆದದ್ದು ರಸ್ತೆಯಲ್ಲಿ ಅದರ ಒಂದು ಬದಿಯಲ್ಲಿ ನಮ್ಮ

ತೋಟ, ಇನ್ನೊಂದು ಬದಿಯಲ್ಲಿ ಅಂಗಡಿ ಇತ್ತು ಎನ್ನುತ್ತಾರೆ. ಸದರಿ ಅಂಗಡಿ ಆ ಸಮಯದಲ್ಲಿ ತೆರೆದಿತ್ತೇ ಎಂದರೆ ಸಾಕ್ಷಿ ತೆರೆದಿತ್ತು ಆದರೆ ಅಂಗಡಿಯಲ್ಲಿ ಯಾರೂ ಇರಲಿಲ್ಲ ನಾನು ಬೊಬ್ಬೆ ಇಟ್ಟ ಮೇಲೆ ಮೊದಲಿಗೆ ಚಾಸಾ.8 ಬಂದರು ನಂತರ ಇತರರು ಬಂದರು ಎನ್ನುತ್ತಾರೆ. ನಾನು ಪೆಟ್ಟಾಗಿದ್ದ ನನ್ನ ಗಂಡನನ್ನು ಮುಟ್ಟಿದ್ದರಿಂದ ಆ ಸಮಯದಲ್ಲಿ ನಾನು ಧರಿಸಿದ್ದ ಬಟ್ಟೆಗಳಿಗೆ ಆತನ ರಕ್ತದ ಕಲೆಗಳಾಗಿದ್ದವು.

37. ನೀವು ಆಸ್ಪತ್ರೆಗೆ ಹೋಗಿದ್ದಿರೇ ಎಂದರೆ ಸಾಕ್ಷಿ ನಾನು ನನ್ನ ಗಂಡನನ್ನು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆನು ಅಲ್ಲಿಂದ ನನ್ನ ಮಗ ಮತ್ತು ಆತನ ಸ್ನೇಹಿತರು ಮಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದರು ಮಾರನೇ ದಿನ ನಾನು ಹೋದೆನು ಎನ್ನುತ್ತಾರೆ. ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಸಂಜೆ 5.00 ಗಂಟೆ ಎನ್ನುತ್ತಾರೆ.

38. ಘಟನಾ ಸ್ಥಳ ರಸ್ತೆಯಾಗಿದ್ದು, ಅದರಲ್ಲಿ ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಸುತ್ತಮುತ್ತ ಮನೆಗಳಿವೆ ಎಂದರೆ ಸಾಕ್ಷಿ ಸ್ವಲ್ಪ ದೂರದಲ್ಲಿ ಇವೆ ಎನ್ನುತ್ತಾರೆ. ನಿಮ್ಮ ಗಂಡ ಮಾತನಾಡುವ ಸ್ಥಿತಿಯಲ್ಲಿ ಇದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ನ.ರಾ.ಪುರ ನ್ಯಾಯಾಧೀಶರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ' ನಾನು ಆ್ಯಂಬುಲೆನ್ಸ್ ನಲ್ಲಿ ನನ್ನ ಗಂಡನನ್ನು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ' ಎಂದು ಈಗ ಓದಿ ಹೇಳಿದ

ರೀತಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಬಾಳೆಹೊನ್ನೂರಿನ ಆಸ್ಪತ್ರೆಯಿಂದ ಆ್ಯಂಬುಲೆನ್ಸ್ ನಲ್ಲಿ ನನ್ನ ಗಂಡನನ್ನು ನನ್ನ ಮಗ ಮತ್ತು ಆತನ ಸ್ನೇಹಿತರು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದರು ನಾನು ಮಾರನೇ ದಿನ ಮಹಜರ್ ಮುಗಿಸಿಕೊಂಡು ಅಲ್ಲಿಗೆ ಹೋದೆನು ಆದರೆ ನಾನು ಆ ರೀತಿ ಹೇಳಿಕೆ ನೀಡಿಲ್ಲ ಎನ್ನುತ್ತಾರೆ. ಸಾಕ್ಷಿಯ ಹೇಳಿಕೆಯ ಸದರಿ ಭಾಗವನ್ನು ನಿಡಿ.1 ಎಂದು ಗುರುತಿಸಲಾಯಿತು.

39. ಮಹಜರ್ ಮಾಡುವ ಸಮಯದಲ್ಲಿ ನಿಮ್ಮ ಗಂಡ ಬದುಕಿದ್ದರೇ ಎಂದರೆ ಸಾಕ್ಷಿ ಇಲ್ಲ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದ 10 ನಿಮಿಷಕ್ಕೆ ಆತ ಮೃತಪಟ್ಟಿದ್ದನು ಎನ್ನುತ್ತಾರೆ. ಮಹಜರ್ ಸಮಯದಲ್ಲಿ ಮು.ಮಾ.2 ಗುದ್ದಲಿ ಎಲ್ಲಿತ್ತು ಎಂದರೆ ಸಾಕ್ಷಿ ನಮ್ಮ ಮನೆಯ ಮುಂದೆ ಇರುವ ಶೆಡ್ಡಿನಲ್ಲಿ ಇತ್ತು ಎನ್ನುತ್ತಾರೆ. ನೀವು ನ.ರಾ.ಪುರ ನ್ಯಾಯಾಧೀಶರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ' ನನ್ನ ಅಣ್ಣ ಆರೋಪಿ ಕುಡ್ಲಿಯಿಂದ ಕೊಚ್ಚುತ್ತಿದ್ದ' ಎಂದು ಹೇಳಿದ್ದೀರಿ ಎಂದರೆ ಸಾಕ್ಷಿ ನಾನು ಗುದ್ಲಿ (ಗುದ್ದಲಿ)ಎಂದು ಹೇಳಿದ್ದೇನೆ ಎನ್ನುತ್ತಾರೆ.

40. ಮಹಜರ್ ಗೆ ಸಾಕ್ಷಿದಾರರಾಗಿ ಚಾಸಾ.7 ರೋಷನ್ ಮತ್ತು ಚಾಸಾ.8 ಅರುಣ್ ವೇಗಸ್ ರವರು ಬಂದಿದ್ದರು. ನಿಪಿ.7 ಮತ್ತು ನಿಪಿ.8 ಫೋಟೋಗಳನ್ನು ಶೆಡ್ಡಿನ ಬಳಿ ತೆಗೆಯಲಾಗಿದೆ ಎಂದರೆ ಸಾಕ್ಷಿ ಸದರಿ ಶೆಡ್ ನಮ್ಮ ಮನೆಯ ಮುಂದೆಯೇ ಇದೆ ಅಲ್ಲಿ ಆರೋಪಿ ಕೃತ್ಯಕ್ಕೆ ಬಳಸಿದ್ದ ಗುದ್ದಲಿ ಬಿದ್ದಿತ್ತು ಎನ್ನುತ್ತಾರೆ.

ನಿಪಿ.3 ಮತ್ತು ನಿಪಿ.4 ಫೋಟೋಗಳಲ್ಲಿ ಕಂಡು ಬರುವ ಜಾಗ ನಿಮ್ಮ ಮನೆಯ ಮುಂಭಾಗದ ರಸ್ತೆ ಎಂದರೆ ಸರಿ.

41. ಮು.ಮಾ.2 ಗುದ್ದಲಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿದ್ದೀರಿ ಹೊರತು ಹಿಂದೆ ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮ ಸಮಕ್ಷಮ ಯಾವುದೇ ಗುದ್ದಲಿ ಅಥವಾ ರಕ್ತ ಮಿಶ್ರಿತ ಮಣ್ಣನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.9 ರಿಂದ ನಿಪಿ.17 ಫೋಟೋಗಳಲ್ಲಿ ನಿಮ್ಮ ಗಂಡನಿಗೆ ಆದ ಹಳೆಯ ಗಾಯಗಳು ಕಂಡು ಬರುತ್ತವೆ ಎಂದರೆ ಸರಿಯಲ್ಲ.

42. ಬಾಳೆಹೊನ್ನೂರು ಆಸ್ಪತ್ರೆಯಲ್ಲಿ ನೀವು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಗಂಡನ ಸ್ನೇಹಿತರು ಯಾರು ಅವರು ಏನು ವ್ಯವಹಾರ ಮಾಡಿಕೊಂಡಿದ್ದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಮ್ಮ ಅಣ್ಣನಾದ ಆರೋಪಿ ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ನೀವು ಆತನ ವಿರುದ್ಧ ಪೊಲೀಸರಿಗೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಗಂಡನ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನೀವು ಗುರುತಿಸಿದ ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು

ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ